

ಚಿತ್ರ: ಈಶ್ವರ ಬಡಿಗೇರ್

ಹಾಗೇ ರಸ ಭೋಜನಕ್ಕಾಗಿ ಜನ ಚದುರ ತೊಡಗಿದರು. ನಾನು ವೇದಿಕೆ ಹತ್ತಿ, ಪುಟ್ಟಕೂಸಿನ ಹೊಸ ಹೆಸರು ಕೇಳಿ, ಅದನ್ನೇ ಆಸ್ವಾದಿಸುತ್ತಲೇ ಉಡುಗೊರೆಯ ಕೆಲಸವನ್ನೂ ಮುಗಿಸಿ ಮರಳಿ ಕೆಳಗಿಳಿದು ಬಂದೆ.

ಅಷ್ಟರಲ್ಲಿ ಮತ್ತೆ ಯೋಚನೆಗೊಂದು ಗ್ರಾಸದ ಪ್ರಸಂಗ!

ಗಂಡಸರಿಬ್ಬರ ಗಟ್ಟಿ ಸಂವಾದ!

'ಅಕೋ ಅಲ್ಲಿ ತರಲೆರಾಮ ಹೋಗ್ತಿದ್ದಾನೆ..........'

'ಹೌದಲ್ಲ?.... 'ಮತ್ತೊಬ್ಬನ ಪ್ರತಿಕ್ರಿಯೆ. ಹಾಗೆಯೇ ಜೋಡಿ ಗಂಡು ಗಹಗಹ!

ನನಗೆ ಖೇದವೆನಿಸಿತು. ಆಗ 'ಜಂಬದ ಕೋಳಿ!', ಈಗ ತರಲೆರಾಮ!' ವೇದಿಕೆಯಲ್ಲಿ ಒಂದು ದೇವ ಸದೃಶ್ಯ ಪುಟ್ಟ ಕಂದನ ನಾಮಕರಣ ಸಮಾರಂಭ ಶಾಸ್ತ್ರೋಕ್ತವಾಗಿ ಸಾಗುತ್ತಿತ್ತು. ಕೆಳಗೆ ಸಭಾಂಗಣದಲ್ಲಿ ಎಲುಬಿಲ್ಲದ ನಾಲಗೆ ಹೊತ್ತ ವಿವೇಚನಾ ಶೂನ್ಯರಿಂದ ಅಸಂಬದ್ಧ ನಾಮಕರಣವೆಂಬ ಕಾರ್ಯಕ್ರಮ, ಯಾತಕ್ಕೂ ಬೇಕಿಲ್ಲದು! ನೀರವವಾಗಿ ನೋಯುವುದು ಬಿಟ್ಟು ಏನು ಮಾಡಲು ಸಾಧ್ಯವಿತ್ತು ನನಗೆ?

ಪಿ. ಸೈರಸ್ ಎಂಬಾತ 'ಯಾವಾಗ ಏನು ಮಾತನಾಡಬೇಕು ಎಂಬುದು ತಿಳಿಯದವನಿಗೆ ಯಾವಾಗ ಮೌನದಿಂದಿರಬೇಕು ಎಂಬುದೂ ತಿಳಿಯುವುದಿಲ್ಲ' ಎಂದಿದ್ದಾನೆ. ನಿಜಕ್ಕೂ ಈ ಹೇಳಿಕೆಯ ತಿಳಿಗೇಡಿ ಮಾನವನ ವರ್ತನೆಗೆ ಕನ್ನಡಿ ಹಿಡಿಯುವಂಥದ್ದು. ಕೆಲವರಿಗಂತೂ ಎಲ್ಲೆಂದಲ್ಲಿ ಮಾತೇ ಮಾತು. ನಾವಾಡುವ ಮಾತುಗಳಲ್ಲಿ ಅರ್ಧದಷ್ಟು ನಿಜಕ್ಕೂ ನಿರರ್ಥಕ, ಟೊಳ್ಳು, ಜಳ್ಳು, ಗಾಳಿಗೆ ತೂರಿ ಬಿಡುವಂತದ್ದು, ಆಡದಿದ್ದರೆ ನಷ್ಟವೇನಿಲ್ಲ, ಮಾತು ಮಿತವಾಗಿದ್ದಷ್ಟೂ ಹಿತಕರ...' ಎನ್ನುವುದು ಅಪ್ರಿಯವಾದರೂ ಕಹಿಸತ್ಯ. 'ಚರ್ಮದಾದ್ದರಿಂದ ಬಾಯಿ ಬದುಕಿತು.... ಲೋಹದ್ದೋ ಮರದ್ದೋ ಆಗಿದ್ದರೆ ಬಿರಿದೋ ಒಡೆದೋ ಹೋಗುತ್ತಿತ್ತು, ಅತಿಮಾತಿನ ಭರಕ್ಕೆ.... ಅನ್ನುತ್ತಿದ್ದರು ನಮ್ಮಮ್ಮ. ಈಗ ಅವರಿಲ್ಲವಾದರೂ ಮಿತಭಾಷಿ, ಹಿತಭಾಷಿಯಾಗಿದ್ದ ಅವರ ಈ ಮಾತು ನನಗೆ ಸದಾ ಮನನೀಯ.

ಬೇಕೆಂದೇ ಕೆಣಕು ಮಾತುಗಳನ್ನಾಡಿ ನೋಯಿಸುವ ಕುಹಕಿಗಳನ್ನು ಸುಮ್ಮನೆ ಇರಗೊಟ್ಟರೆ, ಅಂಥವರ ಪ್ರಾಬಲ್ಯ ಹೆಚ್ಚುತ್ತದೆ. ಅವರು ಎದುರಾಳಿಗಳನ್ನು ಪೆದ್ದರು, ಹೇಡಿಗಳು ಎಂದು ಮತ್ತೆ ಟೀಕಿಸಬಹುದು. ಜಾಣರಾದವರು ಆಗೆಲ್ಲ ಸುಮ್ಮನಿರದೆ, ನೇರವಾಗಿ ಜಗಳವನ್ನೂ ಆಡದೆ, ಶ್ರೀರಾಮಕೃಷ್ಣ ಪರಮಹಂಸರು ಹೇಳಿದಂತೆ ಬುಸ್ಸೆನ್ನುವ ಹಾವಾಗಬೇಕು, ಅದೆಂದರೆ ಹೆದರಿಸುವ ಪರಿಪಾಠ ಅಥವಾ ಹಿಮ್ಮೆಟ್ಟಿಸುವ ದಾರಿ ಹಿಡಿದರೆ ಒಳಿತು. ತಮ್ಮ ವಕ್ರಮಾತಿಗೆ ಹೀಗೊಂದು ತಿರುಮಂತ್ರ ಬಂದಲ್ಲಿ ಪಾಠ ಕಲಿತಾರು ಅವರು, ಆ ಸೂಜಿ ನಾಲಗೆಯ ಚಾಚು ಮಡಚಿಕೊಂಡೀತೋ ಏನೋ! ಪ್ರಯೋಗಶೀಲರು ನಾವಾಗಬೇಕು ಅಷ್ಟೇ. ಇದು ಜಗಳವಿಲ್ಲದೆ ಜಗದಗಲ ಹರಡಬೇಕಾದ ತಂತ್ರ. ಅಷ್ಟಲ್ಲದೆ ಮಾತು ಬಲ್ಲವನಿಗೆ ಜಗಳವಿಲ್ಲ ಅನ್ನುತ್ತಾರೆಯೇ?

ಸ್ವಾಮಿ ವಿವೇಕಾನಂದರು 'ನಮ್ಮ ಅಂತರಂಗದ ಪುಸ್ತಕ ತೆರೆಯುವವರೆಗೆ ಉಳಿದೆಲ್ಲ ಓದು ವ್ಯರ್ಥ'ಎಂಬ ಜ್ವಲಂತ ಹೇಳಿಕೆ ನೀಡಿದ್ದು ಮಾತ್ರವಲ್ಲ, ಅಷ್ಟೇ ಉನ್ನತ ವ್ಯಕ್ತಿತ್ವ ಹೊಂದಿ ಸಾರ್ಥಕ ಬದುಕು ಸವೆಸಿದವರು. ನಮ್ಮ ಮಾತು ಮೆದುಳಿನ ಮೂಲದಿಂದ ಹೊರಟು ಹೃದಯದೊಳಗಿನಿಂದ ಚಿಮ್ಮಿ ಬರಬೇಕು. ಕೆಲವೊಮ್ಮೆ ಓದದವರ ಅಂತರಂಗವು ಪರಿಶುದ್ಧ ಮಾತುಗಳ ಕಣಜವಾಗಿದ್ದರೆ, ಓದಿಕೊಂಡಿದ್ದ ಜಾಣರು ಕೋಣನಂತಾಡುವುದೂ ಇಲ್ಲದಿಲ್ಲ. 'ಪರರ ದೂಷಿಸುವುದಕೆ ಚಾಚಿಕೊಂಡಿರುವಂಥ ನಾಲಗೆಯಲ್ಲ' ಉತ್ತೇಜನಕಾರಿ ನುಡಿಗಳು ಹೊಮ್ಮಿ ಬಂದರೆ ಸತ್ಪರಿಣಾಮವೇ ಆಗುತ್ತದೆ. ಈ ತೆರನಾದ ಉತ್ತೇಜಕ, ಉಪದೇಶದ ನುಡಿಗಳು ಒಳ್ಳೆಯ ತಿರುವಿಗೆ ಕಾರಣವಾಗುವುದಿದೆ, ಗ್ರಹಿಸಿಕೊಂಡಲ್ಲಿ, ಭವಿಷ್ಯದ ಕುಡಿಗಳಾದ ವಿದ್ಯಾರ್ಥಿವೃಂದ ಮುಂದಿರುವ ಶಿಕ್ಷಕ ವರ್ಗದವರಿಗೆ ಇಂತಹ ಒಳ್ಳೆಯ ಮಾತುಗಳನ್ನಾಡುವ ಸದವಕಾಶ ಅನುದಿನವೂ ಕಾದಿರುತ್ತದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ಅರಳಿಸುವಂತಹ ಪ್ರೇರಕ ನುಡಿ ಸದಾ ಸ್ವಾಗತಾರ್ಹವೇ. ಉಗ್ಗುವ ದೋಷವೂ ಕೀಳರಿಮೆಯ ಭಾವವೂ ಕಾಡುತ್ತಿದ್ದ ಬಡ ವಿದ್ಯಾರ್ಥಿನಿಯೊಬ್ಬಳನ್ನು ಬೆಂಬಲಿಸಿ ಉತ್ತೇಜಕ ಮಾತುಗಳಿಂದ ಅವಳನ್ನು ಸರಾಗ ಮಾತುಗಾರ್ತಿಯನ್ನಾಗಿ ಬದಲಾಯಿಸಿದ ಸಾರ್ಥಕತೆಯು ನನ್ನದಾದ್ದರಿಂದ ಈ ಪ್ರಸ್ತಾಪ.

ಈ ಲೋಕವೆಂಬ ಮಹಾಸಂತೆಯಲ್ಲಿ ಕೆಲವರು ಹಿತ್ತಾಳೆ ಕಿವಿಯವರು. ಯಾರ ಬಗ್ಗೆಯೋ ಇನ್ಯಾರೋ ಏನೆಂದರೂ ನೇರ ನಂಬಿ ಬಿಡುತ್ತಾರೆ. ಹಿನ್ನೆಲೆ ತಿಳಿದುಕೊಳ್ಳದೆಯೇ. ಆ ಬಳಿಕ ಅದಕ್ಕೆ ಅನುಗುಣವಾಗಿ ಅವರ ವರ್ತನೆಯೂ ಬದಲಾಗಿ ಬಿಡುತ್ತದೆ. ಪರರ ಮಾತು ಆಲಿಸುವಿಕೆ, ಪ್ರತಿಸ್ಪಂದನೆಗಳಲ್ಲಿ ವೈಚಾರಿಕ ವಿವೇಕವಿದ್ದಲ್ಲಿ ಈ ಮೂರ್ಖತನವನ್ನೂ ಸಂಬಂಧ ಹದಗೆಡುವುದನ್ನೂ ತಪ್ಪಿಸಿಕೊಳ್ಳಬಹುದು. ಅಷ್ಟಲ್ಲದೆ ಹೇಳುತ್ತಾರೆಯೇ? 'ವಿವೇಕ' ಪೋತಕೋ ಮಹಾನ್'— 'ವಿವೇಕವು ಸಂಸಾರ ಸಾಗರವನ್ನು ದಾಟಿಸಬಲ್ಲ ನೌಕೆ' ಎಂದು!

'ನಿಂದರಕೆಂಬ ಹಂದಿಗಳಿದ್ದರೆ ಊರು ಶುದ್ಧವಾಗುತ್ತದೆ' ಎಂದು ಸಾರಿದವರು ದಾಸವರೇಣ್ಯರು. 'ಹೊಗಳಿಕೆ ಎಂಬುದು ಹೊನ್ನಶೂಲ' ವರ್ಣಿಸಿದವರು ವಚನಕಾರರು. ನಿಂದನೆ, ಹೊಗಳಿಕೆ ಎರಡನ್ನೂ ಸಕಾರಾತ್ಮಕವಾಗಿ ಪರಿಗಣಿಸಿದರೆ ಮಾತ್ರ ಸತ್ಪರಿಣಾಮ ಸಾಧ್ಯ. ತ್ರೇತಾಯುಗದಲ್ಲಿ ಕೈಕೆಗೆ ಮಂಥರೆಯ ಪ್ರೇರೇಪಣೆ, ಅಯೋಧ್ಯೆಯಲ್ಲಿ ಸೀತಾಮಾತೆಗೆ ಅಗಸನಿಂದ ಆರೋಪದ ಪ್ರಕರಣ, ದ್ವಾಪರದಲ್ಲಿ ಶ್ರೀಕೃಷ್ಣನಿಗೆ ಶಮಂತಕ ಮಣಿ ಪ್ರಕರಣದಲ್ಲಿನ ಗಂಭೀರ ಹುಸಿ ಅಪರಾಧ ಇವೆಲ್ಲ ಇಲ್ಲದಿದ್ದಲ್ಲಿ ಆಯಾ ಕಥೆಗಳಿಗೆ ಏನೆಲ್ಲ ತಿರುವು ಬರುತ್ತಿತ್ತೋ? ಅಥವಾ ಅದು ಅವರವರ ಕರ್ಮಫಲವೋ? ಬಲ್ಲವರಾರು? ಅಂಥ ಮಾನ್ಯರೆಲ್ಲ ಅಪವಾದ ಹೊತ್ತೇ ಬಾಳ್ವೆ ಸಾಗಿಸಿದರೆಂದರೆ ನಮ್ಮ ನಿಮ್ಮಂಥವರ ಪಾಡೇನು?

ಕಲಿಯುಗವಂತೂ ಇಂತಹ ಕೋಟಿ ಕಥೆಗಳ ಸಾಕ್ಷಿ ವೇದಿಕೆ. 'ಸಂತೋಷ ಭರಿತ ಜೀವನಕ್ಕೆ ಎರಡು ವಸ್ತುಗಳ ಅಗತ್ಯವಿದೆ. ಒಂದು ಧಾನ್ಯ ಮತ್ತೊಂದು ಧ್ಯಾನ. ಧಾನ್ಯವು ದೇಹ ಪೋಷಣೆಗೆ ಹಾಗೂ ಧ್ಯಾನವು ಮನೋ ಪೋಷಣೆಗೆ, ಆ ಮೂಲಕ ದೈವ ಸನ್ನಿಧಿ ಪ್ರವೇಶಿಸಲು ಸಾಧ್ಯ' ಎಷ್ಟೊಂದು ಸತ್ವಪೂರ್ಣ ಹೇಳಿಕೆ ಸಾಯಿಬಾಬಾರದು! ಈ ರೀತಿಯ ಮನೋ ಪೋಷಣೆ ಪಡೆದು ಸಂಸ್ಕಾರಯುತವಾಗಿ ಪಡಿ ಮೂಡುವ ಮಾತು ಅತಿ ಪ್ರಭಾವಶಾಲಿಯೇ ಆಗಿರುತ್ತದೆ. ಈ ನಿತ್ಯ ಮಹಾಸಂತೆ ಲೋಕದೊಳಗಿನ ಈ ಪರಿಯ ಸವಿಮಾತಿಗೆ ಗಿರಾಕಿಗಳೆಂಬ ಜನರು ಅನುದಿನ ಮುಗಿಬೀಳುತ್ತಾರೆ. ಹಾಗೆಯೇ ಕೈಮುಗಿದು ಬೀಳ್ಕೊಡುತ್ತಾರೆ ಎಂಬುದೂ ಸತ್ಯಸ್ಯ ಸತ್ಯ!